# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ಪಟ್ಟಣ ಪಂಚಾಯತಿಯಿಂದ ಕೈಬಿಟ್ಟ ಸಹಸ್ರಳ್ಳಿ, ಕೊಂಡೆಮನೆ, ಬಾಳಗಿಮನೆ ಮತ್ತು ಹಿತ್ಲಕಾರಗದ್ದೆ ಗ್ರಾಮಗಳನ್ನು ಗ್ರಾಮ ಪಂಚಾಯತಿಗಳಿಗೆ ಸೇರಿಸುವ ಕುರಿತು – ಆದೇಶ

ಓದಲಾಗಿದೆ:
1. ಅಧಿಸೂಚನೆ ಸಂಖ್ಯೆ: ವನಿಇ 641 ಎಂಎಲ್ಆರ್ 1995(39), ದಿನಾಂಕ:09.01.1996.
2. ಅಧಿಸೂಚನೆ ಸಂಖ್ಯೆ: ನಅಇ 21 ಎಂಎಲ್ಆರ್ 2015, ದಿನಾಂಕ:07.06.2016.
3. ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ ರವರ ಪತ್ರ ಸಂಖ್ಯೆ ಗ್ರಾತಾ:ಜಿಪ:ಚುನಾವಣೆ.ವಿವ–23/2018–19.

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿ ಯಲ್ಲಾಪುರ ತಾಲ್ಲೂಕಿನ ಸಹಸ್ರಳ್ಳಿ, ಕೊಂಡಮನೆ, ಹಿತ್ಲಕಾರಗದ್ದೆ ಮತ್ತು ಬಾಳಗಿಮನೆ ಪ್ರದೇಶಗಳನ್ನು ಸೇರಿಕೊಂಡಂತೆ ಯಲ್ಲಾಪುರ ಪಟ್ಟಣ ಪಂಚಾಯತಿ ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ (2) ರಲ್ಲಿ ಯಲ್ಲಾಪುರ ಪಟ್ಟಣ ಪಂಚಾಯತಿ ವ್ಯಾಪ್ತಿಯ ಪ್ರದೇಶದಿಂದ ಸಹಸ್ರಳ್ಳಿ, ಕೊಂಡಮನೆ, ಹಿತ್ಲಕಾರಗದ್ದೆ ಮತ್ತು ಬಾಳಗಿಮನೆ ಪ್ರದೇಶಗಳನ್ನು ಬೇರ್ಪಡಿಸಲಾಗಿದೆ.

ಮೇಲೆ ಓದಲಾದ (3) ರಲ್ಲಿ ಯಲ್ಲಾಪುರ ಪಟ್ಟಣ ಪಂಚಾಯತಿ ವ್ಯಾಪ್ತಿಯಿಂದ ಕೈಬಿಟ್ಟ ಗ್ರಾಮಗಳನ್ನು/ಮಜರೆಗಳನ್ನು ಈ ಕೆಳಗೆ ನಮೂದಿಸಿದ ಗ್ರಾಮ ಪಂಚಾಯತಿಗಳಿಗೆ ಸೇರ್ಪಡೆ ಮಾಡುವ ಕುರಿತು ಸರ್ಕಾರಕ್ಕೆ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| ಕ್ರ.ಸಂ. | ಪಟ್ಟಣ ಪಂಚಾಯತಿಯಿಂದ ಕೈಬಿಟ್ಟಿರುವ ಗ್ರಾಮ/ಮಜರೆಗಳ ವಿವರ | ಸೇರ್ಪಡೆಗೊಳಿಸಬೇಕಾದ ಗ್ರಾಮ ಪಂಚಾಯತಿ |
|---|---|---|
| 01 | ಗ್ರಾಮ: ಸಹಸ್ರಳ್ಳಿ ಪೂರ್ಣ ಗ್ರಾಮ | ಚಂದಗುಳಿ (ಉಪಳೇಶ್ವರ) |
| 02 | ಗ್ರಾಮ: ಕೊಂಡೆಮನೆ | ಚಂದಗುಳಿ (ಉಪಳೇಶ್ವರ) |
| 03 | ಗ್ರಾಮ: ಹಿತ್ತಲಕಾರಗದ್ದೆ ಗ್ರಾಮದಲ್ಲಿ ಭಾಗಶಃ ಸೇರ್ಪಡೆಗೊಳಿಸಲು ಉದ್ದೇಶಿಸಿರುವ ಮಜರೆಗಳಾದ ಗೌಡ್ರಕೆರೆ, ಕೇರಾಳಿ, ದರ್ಬೆಮನೆ, ಹುಡ್ಲಗದ್ದೆ, ತೋಟಮನೆ, ಮುಂಡಗೋಡಿಮನೆ, ಕಾಳಿಮನೆ, ಹುಣಸೆಪಾಲ, ಕಣ್ಣಿಮನೆ. | ನಂದೊಳ್ಳಿ |
| 04 | ಗ್ರಾಮ: ಬಾಳಗಿಮನೆ ಗ್ರಾಮದಲ್ಲಿ ಭಾಗಶಃ ಸೇರ್ಪಡೆಗೊಳಿಸಲು ಉದ್ದೇಶಿಸಿರುವ ಮಜರೆಗಳಾದ ಬದನೆಪಾಲ, ಕುಂಬ್ರಜಡ್ಡಿ, ಹರಕನಪಾಲ, ಗೋಪಾಲಕೃಷ್ಣ ದೇವಸ್ಥಾನ, ಕರಿಪಾಲ, ಮೂಳೆಮನೆ. | ಅನಗೋಡ |

ಆಡಳಿತಾತ್ಮಕ ಅನುಕೂಲತೆ ಹಾಗೂ ಸಾರ್ವಜನಿಕ ಅನುಕೂಲಕ್ಕಾಗಿ ಯಲ್ಲಾಪುರ ಪಟ್ಟಣ ಪಂಚಾಯತಿಯಿಂದ ಕೈಬಿಟ್ಟಿರುವ ಬಾಳಗಿಮನೆ ಭಾಗಶಃ ಗ್ರಾಮವನ್ನು ಅನಗೋಡ ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡುವುದು, ಹಿತ್ಲಕಾರಗದ್ದೆ ಭಾಗಶಃ ಗ್ರಾಮವನ್ನು ನಂದೊಳ್ಳಿ ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡುವುದು, ಸಹಸ್ರಳ್ಳಿ ಮತ್ತು ಕೊಂಡೆಮನೆ ಪೂರ್ಣ ಗ್ರಾಮಗಳನ್ನು ಚಂದಗುಳಿ(ಉಪಳೇಶ್ವರ) ಗ್ರಾಮ ಪಂಚಾಯತಿಗೆ ಸೇರ್ಪಡೆ

ಮಾಡಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 115(1) ರನ್ವಯ ಸರ್ಕಾರಕ್ಕೆ ಜಿಲ್ಲಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು ಸದರಿ ಗ್ರಾಮದ ಸಾರ್ವಜನಿಕರು ಗ್ರಾಮ ಪಂಚಾಯತಿಯಲ್ಲಿ ತಮ್ಮ ಕೆಲಸ ಕಾರ್ಯಗಳಿಗೆ ಸಂಚರಿಸಲು ಹತ್ತಿರವಿರುವುದರಿಂದ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ ಯಲ್ಲಾಪುರ ಪಟ್ಟಣ ಪಂಚಾಯತಿಯಿಂದ ಕೈಬಿಟ್ಟಿರುವ ಬಾಳಗಿಮನೆ ಭಾಗಶಃ ಗ್ರಾಮವನ್ನು ಅನಗೋಡ ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡುವುದು, ಹಿತ್ಲಕಾರಗದ್ದೆ ಭಾಗಶಃ ಗ್ರಾಮವನ್ನು ನಂದೊಳ್ಳಿ ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡುವುದು, ಸಹಸ್ರಳ್ಳಿ ಮತ್ತು ಕೊಂಡೆಮನೆ ಪೂರ್ಣ ಗ್ರಾಮಗಳನ್ನು ಚಂದಗುಳಿ(ಉಪಳೇಶ್ವರ) ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡಬೇಕಾಗಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 115(1) ರನ್ವಯ, ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಮತ್ತು ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಸರ್ಕಾರವು ಪೂರ್ವ ಪ್ರಕಟನೆಯ ತರುವಾಯ ಅಧಿಸೂಚನೆಯ ಮೂಲಕ ಸ್ಥಳೀಯ ಪ್ರದೇಶವು ಪಂಚಾಯತಿ ಪ್ರದೇಶವಾಗತಕ್ಕದ್ದೆಂದು ನಿರ್ದೇಶಿಸಬಹುದು.

ಆದ್ದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 115(1) ರನ್ವಯ ಯಲ್ಲಾಪುರ ಪಟ್ಟಣ ಪಂಚಾಯತಿಯಿಂದ ಕೈಬಿಟ್ಟಿರುವ ಬಾಳಗಿಮನೆ ಭಾಗಶಃ ಗ್ರಾಮವನ್ನು ಅನಗೋಡ ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡುವುದು, ಹಿತ್ಲಕಾರಗದ್ದೆ ಭಾಗಶಃ ಗ್ರಾಮವನ್ನು ನಂದೊಳ್ಳಿ ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡುವುದು, ಸಹಸ್ರಳ್ಳಿ ಮತ್ತು ಕೊಂಡೆಮನೆ ಪೂರ್ಣ ಗ್ರಾಮಗಳನ್ನು ಚಂದಗುಳಿ(ಉಪಳೇಶ್ವರ) ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡಲು ಸರ್ಕಾರ ನಿರ್ಧರಿಸಿದೆ. ಅದರಂತೆ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 970 ಗ್ರಾಪಂಅ 2017,</u>**
**<u>ಬೆಂಗಳೂರು, ದಿನಾಂಕ: 04.12.2018</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 115(1) ರನ್ವಯ ಯಲ್ಲಾಪುರ ಪಟ್ಟಣ ಪಂಚಾಯತಿಯಿಂದ ಕೈಬಿಟ್ಟಿರುವ ಬಾಳಗಿಮನೆ ಭಾಗಶಃ ಸೇರ್ಪಡೆಗೊಳಿಸಲು ಉದ್ದೇಶಿಸಿರುವ ಮಜರೆ ಗ್ರಾಮಗಳಾದ ಬದನೆಪಾಲ, ಕುಂಬ್ರಜಡ್ಡಿ, ಹರಕನಪಾಲ, ಗೋಪಾಲಕೃಷ್ಣ ದೇವಸ್ಥಾನ, ಕರಿಪಾಲ, ಮೂಳೆಮನೆ. ಗ್ರಾಮಗಳನ್ನು ಅನಗೋಡ ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡುವುದು, ಹಿತ್ಲಕಾರಗದ್ದೆ ಭಾಗಶಃ ಸೇರ್ಪಡೆಗೊಳಿಸಲು ಉದ್ದೇಶಿಸಿರುವ ಮಜರೆ ಗ್ರಾಮಗಳಾದ ಗೌಡ್ರಕೇರಿ, ಕೇರಾಳಿ, ದರ್ಬೆಮನೆ, ಹುಡ್ಲಗದ್ದೆ, ತೋಟಮನೆ, ಮುಂಡಗೋಡಿಮನೆ, ಕಾಳಿಮನೆ, ಹುಣಸೆಪಾಲ, ಕಣ್ಣಿಮನೆ ಗ್ರಾಮಗಳನ್ನು ನಂದೊಳ್ಳಿ ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡುವುದು, ಸಹಸ್ರಳ್ಳಿ ಮತ್ತು ಕೊಂಡೆಮನೆ ಪೂರ್ಣ ಗ್ರಾಮಗಳನ್ನು ಚಂದಗುಳಿ(ಉಪಳೇಶ್ವರ) ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡಿ ಸರ್ಕಾರ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

4/12/18
(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.

3. ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ, ಉತ್ತರ ಕನ್ನಡ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ, ಉತ್ತರ ಕನ್ನಡ.
5. ಕಾರ್ಯದರ್ಶಿಗಳು, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು.
6. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
7. ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಚಂದಗುಳಿ(ಉಪಳೇಶ್ವರ), ನಂದೊಳ್ಳಿ ಹಾಗೂ ಅನಗೋಡ ಗ್ರಾಮ ಪಂಚಾಯತಿಗಳು, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸಂಪಾದಕರು, ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು.
5. ಗಣಕ ಕೋಶ – ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
6. ಹೆಚ್ಚುವರಿ ಪ್ರತಿ/ಶಾಖಾ ರಕ್ಷಕ ಕಡತ.